(ಸದನವು 1.40 ಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3.10 ಗಂಟೆಗೆ ಪುನಃ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಅಧ್ಯಕ್ಷರು :— ಈಗ ಶೂನ್ಯವೇಳೆ. ಇದನ್ನು ಮುಗಿಸಿ ಬೇಡಿಕೆಗಳನ್ನು ತೆಗೆದುಕೊಳ್ಳುತ್ತೇನೆ. ಸಭಾಪತಿಯವರೇ, ನೀವು ಮಾತನಾಡಿ.

<u>ಅಧ್ಯಕ್ಷರ ಅಪ್ಪಣೆ ಮೇರೆಗೆ</u>

(ಅ) ಪ್ರಕೃತಿ ವಿಕೋಪ ಹಣದ ಅಡಿಯಲ್ಲಿ ಉಡುಪಿ ಜಿಲ್ಲೆಗೆ ಬಂದಿರತಕ್ಕ ಹಣವನ್ನು ಉಡುಪಿ ಜಿಲ್ಲಾಧಿಕಾರಿಗಳು ದುರುಪಯೋಗ ಮಾಡಿರುವುದು.

+ ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಸನ್ಮಾನ್ಯ ಸಭಾಧ್ಯಕ್ಷರೆ, ಪ್ರಕೃತಿ ವಿಕೋಪ ಹಣದ ಅಡಿಯಲ್ಲಿ ಉಡುಪಿ ಜಿಲ್ಲೆಗೆ ಬಂದಿರತಕ್ಕಂಥ ಹಣವನ್ನು ಉಡುಪಿ ಜಿಲ್ಲಾಧಿಕಾರಿಗಳು ದುರುಪಯೋಗ ಮಾಡಿದ್ದರ ಬಗ್ಗೆ ನಾನು ಮೊನ್ನೆ ನಿಯಮ 351ರ ಅಡಿಯಲ್ಲಿ ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ಹೀಗೆ ಬಂದಿದೆ- 1998-99ನೇ ಸಾಲಿನಲ್ಲಿ ಪ್ರಕೃತಿ ವಿಕೋಪದ ಪರಿಹಾರ ನಿಧಿಯಿಂದ ಒಂದು ಕೋಟಿ 63 ಲಕ್ಷ 95 ಸಾವಿರ ರೂಪಾಯಿಗಳನ್ನು ಉಡುಪಿ ಜಿಲ್ಲೆಗೆ ಬಿಡುಗಡೆ ಮಾಡಲಾಗಿತ್ತು.

ಶ್ರೀ ಎಂ.ಪಿ. ಪ್ರಕಾಶ್ :— ಇದು ಯಾವ ಇಲಾಖೆಗೆ ಸಂಬಂಧಪಟ್ಟಿದ್ದು? ನೋಟೀಸ್ ಕೊಟ್ಟಿದ್ದಾರೆಯೆ?.

ಶ್ರೀ ಯು.ಆರ್. ಸಭಾಪತಿ :— ಆದರಲ್ಲಿ ಪ್ರಕೃತಿ ವಿಕೋಪದ ಎಲ್ಲಾ ಪರಿಹಾರ ಕಾರ್ಯಗಳಿಗೆ ಖರ್ಚು ಮಾಡಿ 31-3-99 ಕ್ಕೆ ಬಾಕಿ ಉಳಿದಿರುವ ಹಣ 28.58 ಲಕ್ಷ ರೂಪಾಯಿಗಳು. ಹೊಸ ಜಿಲ್ಲೆ ನಿರ್ಮಾಣವಾದ ತಕ್ಷಣ ಜಿಲ್ಲಾಧಿಕಾರಿಗಳಿಗೆ ಯಾವುದೇ ಕಟ್ಟಡ ಇರಲಿಲ್ಲವಾದ್ದರಿಂದ ತಕ್ಷಣಕ್ಕೆ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಿ ಜಿಲ್ಲಾಧಿಕಾರಿಯವರು ತಮ್ಮ ಪ್ರಕೃತಿ ವಿಕೋಪದ ಅಡಿಯಲ್ಲಿ ಉಳಿದಿದ್ದ ಅನುದಾನದಲ್ಲಿ 8.60 ಲಕ್ಷ ರೂಪಾಯಿಗಳನ್ನು ಅಧಿಕೃತ ನಿವಾಸದ ಕಟ್ಟಡದ ಸಲುವಾಗಿ ಬಳಸಿಕೊಂಡಿರುತ್ತಾರೆ. ಪ್ರಕೃತಿ ವಿಕೋಪದ ಹಣವನ್ನು ಬಳಸುವಾಗ ಯಾವುದೇ ಪರಿಹಾರ ಕಾರ್ಯಗಳು ಬಾಕಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಇದು ಸಂಪೂರ್ಣವಾಗಿ ಸುಳ್ಳು ಹೇಳಿಕೆ. ಇವತ್ತು 31-3-99ರವರೆಗೆ ಹಣ 28.58 ಲಕ್ಷ ರೂಪಾಯಿಗಳು ಹೊಸ ಜಿಲ್ಲೆ ನಿರ್ಮಾಣವಾದ ತಕ್ಷಣ ಜಿಲ್ಲಾಧಿಕಾರಿಗಳಿಗೆ ಯಾವುದೇ ಕಟ್ಟಡ ಇರಲಿಲ್ಲವಾದ್ದರಿಂದ ತಕ್ಷಣಕ್ಕೆ ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಿ ಜಿಲ್ಲಾಧಿಕಾರಿಯವರು ತಮ್ಮ ಪ್ರಕೃತಿ ವಿಕೋಪದ ಅಡಿಯಲ್ಲಿ ಉಳಿದಿದ್ದ ಅನುದಾನದಲ್ಲಿ 8.60 ಲಕ್ಷ ರೂಪಾಯಿಗಳನ್ನು ಅಧಿಕೃತ ನಿವಾಸದ ಕಟ್ಟಡದ

ಸಲುವಾಗಿ ಬಳಸಿಕೊಂಡಿರುತ್ತಾರೆ. ಪ್ರಕೃತಿ ವಿಕೋಪದ ಹಣವನ್ನು ಬಳಸುವಾಗ ಯಾವುದೇ ಪರಿಹಾರ ಕಾರ್ಯಗಳು ಬಾಕಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಇದು ಸಂಪೂರ್ಣವಾಗಿ ಸುಳ್ಳು ಹೇಳಿಕೆ. ಇವತ್ತು 31-3-99ರವರೆಗೆ ಪಾವತಿಮಾಡಬೇಕಾದ ಬಿಲ್‌ಗಳೆಷ್ಟು ಈ ವಿವರಗಳನ್ನು ನಾನು ಸಂಗ್ರಹಿಸಿದ್ದೇನೆ ಇದರಲ್ಲಿ ಸುಮಾರು 20 ಲಕ್ಷ ರೂಪಾಯಿಗಳ ಮನೆಯನ್ನು ಜಿಲ್ಲಾಧಿಕಾರಿಗಳು ಕಟ್ಟಿಸಿದ್ದಾರೆ. ಇದಕ್ಕೆ ಸರ್ಕಾರದ ಪೂರ್ವಾನುಮತಿ ಇಲ್ಲ. ಎರಡನೆಯದಾಗಿ 8.60 ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡುವಾಗ 31-3-99ಕ್ಕೆ ಯಾವುದೇ ಪರಿಹಾರ ಕಾರ್ಯಕ್ಕೆ ಖರ್ಚು ಮಾಡುವ ಹಣ ಬಾಕಿ ಇಲ್ಲದೆ 28.59 ಲಕ್ಷ ರೂಪಾಯಿ ಬಾಕಿ ಉಳಿದಿದೆ ಎಂದು ಹೇಳಿದ್ದಾರೆ. ನಾನು ಇತ್ತೀಚೆಗೆ ಉಡುಪಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಅವರಿಂದ ಪಡೆದುಕೊಂಡ ಮಾಹಿತಿಯಂತೆ- 31-3-99ರ ಅವಧಿಗೆ ಮಳೆಹಾನಿ ಅಂದಾಜು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದು ಒಟ್ಟು 2 ಕೋಟಿ 42 ಲಕ್ಷ 55 ಸಾವಿರ ಎಂದು ಕೊಟ್ಟಿದ್ದಾರೆ. ಇದರಲ್ಲಿ ಬಿಡುಗಡೆಯಾದ ಮೊತ್ತ 49.96 ಲಕ್ಷ ರೂ. ಎಂದು ಹೇಳಿದ್ದಾರೆ. 31-3-99ಕ್ಕೆ ಪಾವತಿ ಮಾಡಬೇಕಾದ ಪೆಂಡಿಂಗ್ ಬಿಲ್ಸ್ 24.24 ಲಕ್ಷ ರೂಪಾಯಿಗಳು. ಇದರಲ್ಲಿ ಉಡುಪಿ ವಿಭಾಗಕ್ಕೆ 31-3-99 ಕ್ಕೆ ಪೆಂಡಿಂಗ್ ಬಿಲ್ 15.44 ಲಕ್ಷ ರೂ. ಇದೆ. ಕುಂದಾಪುರಕ್ಕೆ 8.80 ಲಕ್ಷ ರೂ. ಬಾಕಿ ಇದೆ. ಇದು 31-3-99 ಕ್ಕೆ ಪೆಂಡಿಂಗ್ ಬಿಲ್ಸ್ ಇರುವಂಥಾದ್ದು. ಇಲ್ಲಿ ಮಾನ್ಯ ಸಚಿವರನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾರೆ ಎಂದರೆ ಯಾವುದೇ ಪೇಮೆಂಟ್ ಮಾಡುವುದಕ್ಕೆ ಇಲ್ಲ ಎಂದು ಹೇಳಿ 28.58 ಲಕ್ಷ ರೂಪಾಯಿ ಉಳಿದಿದ್ದರಿಂದ ಅದನ್ನು ಅಂದರೆ ಪ್ರಕೃತಿ ವಿಕೋಪದ ಹಣವನ್ನೇ ಜಿಲ್ಲಾಧಿಕಾರಿಗಳು ತಮ್ಮ ಅಧಿಕೃತ ಕಚೇರಿಗೆ ಹಾಕಿದ್ದಾರೆ. ನನ್ನ ಪ್ರಶ್ನೆ ಇಷ್ಟೆ. ಒಂದನೆಯದಾಗಿ ಪ್ರಕೃತಿ ವಿಕೋಪದ ಹಣವನ್ನು ಎಂತಹ ಸಂದರ್ಭದಲ್ಲಿಯೂ ಕೂಡ ಜಿಲ್ಲಾಧಿಕಾರಿಗಳ ನಿವಾಸಕ್ಕೆ ಬಳಸುವುದಕ್ಕೆ ಆಗುತ್ತದೇನು? ಕೋಟಿಗಟ್ಟಲೆ ಇಲ್ಲಿ ಪೆಂಡಿಂಗ್ ಇದೆ. ಲೋಕೋಪಯೋಗಿ ಇಲಾಖೆಯ ಒಂದೇ ಪ್ರಸ್ತಾವನೆ ಬಗ್ಗೆ ನಾನು ಹೇಳಿದ್ದೇನೆ. ಎಂ.ಐ. ಇಂಜಿನಿಯರಿಂಗ್ ವಿಭಾಗದವರದ್ದು ಇವತ್ತು ಫ್ಯಾಕ್ಸ್ ಮೂಲಕ ನಾನು ತರಿಸಿಕೊಂಡಿದ್ದೇನೆ. ಅದರಲ್ಲಿ 31-3-99ಕ್ಕೆ 84.46 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ ಮತ್ತು 8.97ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿದ್ದಾರೆ. ಇನ್ನು ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಇವತ್ತು ತರಿಸಿಕೊಂಡ ಮಾಹಿತಿ ಪ್ರಕಾರ 31-3-99 ಕ್ಕೆ 1998-99ನೇ ಸಾಲಿನ ಉಡುಪಿ ಜಿಲ್ಲೆಯ ಪ್ರಕೃತಿ ವಿಕೋಪಕ್ಕೆ ಹಾನಿಗೊಂಡ ಕಾಮಗಾರಿಗಳಿಗೆ ಸಲ್ಲಿಸಿದ ಪ್ರಸ್ತಾವನೆ ಮತ್ತು ಬಿಡುಗಡೆ ಅನುದಾನ ಎಂದು ಕೊಟ್ಟಿದ್ದಾರೆ. ಜಿಲ್ಲಾ ಪಂಚಾಯತ್ ಇಂಜನಿಯರಿಂಗ್ ವಿಭಾಗದಿಂದಲೇ ಪ್ರಕೃತಿ ವಿಕೋಪದಲ್ಲಿ 4.17 ಕೋಟಿ ರೂಪಾಯಿಗಳ ಪ್ರಸ್ತಾವನೆ ಪೆಂಡಿಂಗ್ ಇದೆ. ಇದಕ್ಕೆ 45.54 ಲಕ್ಷ ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಹಾಗಾದರೆ ಪ್ರಕೃತಿ ವಿಕೋಪದಲ್ಲಿ 28.55 ಲಕ್ಷ ರೂ. ಬಾಕಿ ಉಳಿದಿದೆ ಎಂದು ಹೇಳಿದ್ದು ಯಾವ ಆಧಾರದ ಮೇಲೆ? ಸದನಕ್ಕೆ ಸಂಪೂರ್ಣವಾಗಿ ತಪ್ಪು ಮಾಹಿತಿ ತಿಳಿಸಿದ ಜಿಲ್ಲಾಧಿಕಾರಿಗಳನ್ನು ಕರೆಸಿ ಸದನ

ಛೀಮಾರಿ ಹಾಕಬೇಕಾಗಿದೆ. ಇದು ಒಂದನೇ ಪ್ರಶ್ನೆ. ಇವರು ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ತಮಾಷೆ ಎಂದರೆ ನಮ್ಮ ಸಚಿವರು ಜಿಲ್ಲಾಧಿಕಾರಿಗಳ ಸಂಪೂರ್ಣ ರಕ್ಷಣೆಯ ಹೊಣೆಯನ್ನು ಹೊತ್ತುಕೊಂಡಿದ್ದಾರೆ. ಅದಕ್ಕೆ ಇಲ್ಲಿ ಉತ್ತರ ಇದೆ. ಈ ಪ್ರಕೃತಿ ವಿಕೋಪದ ಹಣವನ್ನು ಬಳಸುವಾಗ ಯಾವುದೇ ಪರಿಹಾರ ಕಾರ್ಯಗಳು ಬಾಕಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೆ, 1999-2000ನೇ ಸಾಲಿಗೆ ಪರಿಹಾರ ಕಾರ್ಯಗಳಿಗೆ 50 ಲಕ್ಷ ರೂಪಾಯಿಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಉಡುಪಿ ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ. ಮಾರ್ಚ್ 1999ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಬಳಿ ಸಿ.ಆರ್.ಎಫ್. ಅಡಿಯಲ್ಲಿ 10.30 ಲಕ್ಷ ರೂ ಲಭ್ಯ ಇರುತ್ತದೆ. ಒಟ್ಟಿನಲ್ಲಿ ಪರಿಹಾರ ಕಾರ್ಯಗಳಿಗೆ ಯಾವುದೇ ಹಣದ ಕೊರತೆ ಇರುವುದಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ಈ ಮೂರೂ ಇಲಾಖೆಗಳಿಂದ ಹೋದ ಪ್ರಸ್ತಾವನೆಯ ಪರಿಸ್ಥಿತಿ ಏನು? ಪೆಂಡಿಂಗ್ ಬಿಲ್ಸ್ ಇದೆಯೆಂದು ಹೇಳಿ ಲೋಕೋಪಯೋಗಿ ಇಲಾಖೆಯವರು ಕೊಟ್ಟಂಥ ವಿಷಯದ ಸತ್ಯಾಂಶ ಏನು? ಇನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೆ. ಸಂಸತ್ ಸದಸ್ಯರ ನಿಧಿಯಿಂದ 4.65 ಲಕ್ಷ ರೂ.ಗಳನ್ನು ವಾಚನಾಲಯ ನಿರ್ಮಾಣಕ್ಕೆ ಎಂದು ತೆಗೆದುಕೊಂಡು ವಾಚನಾಲಯವನ್ನು ನಿರ್ಮಾಣ ಮಾಡದೆ ಜಿಲ್ಲಾಧಿಕಾರಿಗಳ ಕೊಠಡಿಗೆ ಏರ್‌ಕಂಡೀಷನ್ ಮತ್ತು ಪೂರ್ತಿಯಾಗಿ ಪೀಠೋಪಕರಣಗಳನ್ನು ಹಾಕಿಕೊಂಡು ಕುಳಿತುಕೊಂಡಿದ್ದಾರೆ. 4.65 ಲಕ್ಷ ರೂಪಾಯಿಗಳನ್ನು ವಾಚನಾಲಯ ನಿರ್ಮಾಣಕ್ಕೆ ಲೋಕಸಭಾ ಸದಸ್ಯರ ನಿಧಿಯಿಂದ ಬಿಡುಗಡೆ ಮಾಡಿ ಅದನ್ನು ನಿಯಮಾವಳಿ ಅನ್ವಯ ಖರ್ಚು ಮಾಡಲಾಗಿರುತ್ತದೆ ಎಂದು ಹೇಳುತ್ತಾರೆ. ಇನ್ನೊಂದು ಪ್ರಶ್ನೆಯನ್ನು ನಾನು ಮಾಡಿದ್ದೆ. ಸ್ವರ್ಣಜಯಂತಿಯ ಹೆಸರಿನಲ್ಲಿ ಸಭಾ ಭವನವನ್ನು 4.5 ಲಕ್ಷ ರೂಪಾಯಿ ಖರ್ಚುಮಾಡಿಬಿಟ್ಟು ಸ್ವರ್ಣ ಜಯಂತಿಯ ಸಭಾಭವನವನ್ನು ಕಟ್ಟದೆ ಅಧಿಕಾರಿಗಳಿಗೆ ಆಟ ಆಡಲಿಕ್ಕೆ ಒಳಾಂಗಣ ಕ್ರೀಡಾಂಗಣ ರಚನೆ ಮಾಡಿ ಬೆಳಿಗ್ಗೆ ಸಾಯಂಕಾಲ ಈ ಜಿಲ್ಲಾಧಿಕಾರಿಗಳು ಅಲ್ಲಿ ಆಟವಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿಯ ಒಳಗೆ ಹಿಂದೆ ಇದ್ದ ಗೋಡೌನ್‌ನ್ನು ಇದಕ್ಕೆ ಉಪಯೋಗಿಸಿಕೊಂಡಿದ್ದಾರೆ. ಹೊರಗಡೆಯಿಂದ ಮಾತ್ರ ಬೋರ್ಡು ಹಾಕಿದ್ದಾರೆ ಸ್ವರ್ಣಜಯಂತಿ ಸಭಾಭವನ ಎಂದು. ಆದರೆ ಇಲ್ಲಿ ಇವರು ಅದನ್ನು ಶೆಟಲ್ ಕೋರ್ಟ್ ಮಾಡಿದ್ದಾರೆ.

ಮಾನ್ಯ ಸಭಾಧ್ಯಕ್ಷರೇ, ಇದಕ್ಕೆ ಮಾನ್ಯ ಸಚಿವರು ಈ ರೀತಿ ಉತ್ತರ ಕೊಡುತ್ತಾರೆ. ಸ್ವರ್ಣ ಜಯಂತಿ ಸಭಾ ಭವನಕ್ಕೆ 4.5 ಲಕ್ಷ ರೂಪಾಯಿಗಳ ಹಣವನ್ನು ಸ್ವರ್ಣಜಯಂತಿ ಯೋಜನೆಯ ಅಡಿಯಲ್ಲಿ ನಿಯಮಗಳನ್ವಯ ಬಿಡುಗಡೆ ಮಾಡಲಾಗಿರುತ್ತದೆ. ಆಮೇಲೆ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ಅವರಿಗೆ ರಕ್ಷಣೆ ಕೊಡುತ್ತಿದ್ದಾರೆ. ಜಿಲ್ಲಾಧಿಕಾರಿಯವರ ಕಟ್ಟಡದ ಸಲುವಾಗಿ 25ರೂ.ಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ತರಾತುರಿ ಪರಿಶೀಲನೆಯಲ್ಲಿದ್ದು, ಈ ಅನುದಾನ ಬಿಡುಗಡೆಯಾದ ನಂತರ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಸದರಿ ಉದ್ದೇಶಕ್ಕೆ ಬಳಸಿಕೊಂಡಿರುವ 8.60 ಲಕ್ಷ ರೂಪಾಯಿಗಳನ್ನು ತುಂಬಿಸಲಾಗುವುದು. ಇವರು ಪ್ರಕೃತಿ ವಿಕೋಪದ ಹಣವನ್ನು ಈ ರೀತಿ

ಉಪಯೋಗಿಸಿಕೊಂಡಿದ್ದಾರೆ ಇಲ್ಲಿ ಕೋಟ್ಯಾಂತರ ರೂಪಾಯಿಯ ಕಾಮಗಾರಿಗಳು, ಪ್ರಸ್ತಾವನೆಗಳು ಪೆಂಡಿಂಗ್ ಇರುವಾಗ ಇವರ ಮನೆ, ಇವರಿಗೆ ಆರ್ಜೆಂಟ್ ಆಗಿತ್ತೆ 3-4 ಸಾವಿರ ರೂಪಾಯಿಗಳ ಬಾಡಿಗೆ ಕೊಡುವಂಥ ಮನೆ ಇತ್ತು. ಅದನ್ನು ಬಿಟ್ಟು 20 ಲಕ್ಷ ರೂಪಾಯಿಗಳ ಮನೆಯನ್ನು ಕಟ್ಟಿದ್ದಾರೆ. ಈ 20 ಲಕ್ಷ ರೂಪಾಯಿಗಳ ಮನೆಗೆ ಯಾರು ಅನುಮತಿಯನ್ನು ಕೊಟ್ಟರು? ಈ 20ಲಕ್ಷ ರೂಪಾಯಿಗಳನ್ನು ಯಾವ ಪ್ರಾವಿಷನ್ ಮೇಲೆ ಕೊಟ್ಟಿದ್ದೀರಿ? ಅದಕ್ಕೆ ಸ್ಯಾಂಕ್ಷನ್ ಕೊಟ್ಟಿದ್ದೀರಾ? ಆ ಕಾಂಟ್ರಾಕ್ಟರಿಗೊಂದು ಬಾರ್ ಅಂಡ್ ರೆಸ್ಟೋರೆಂಟ್‌ಗೆ ಲೈಸೆನ್ಸ್ ಕೊಡಿಸಿದ್ದಾರೆ. ಅವರ ಜೊತೆಯಲ್ಲಿ ಇವರು ಬೊಂಬಾಯಿಗೆ ಪ್ರವಾಸ ಮಾಡುವುದು, ಶಬರಿಮಲೈಗೆ ಟೂರ್ ಮಾಡುವುದು. ಅವಕಾಶವಿದೆ. ಆದ್ದರಿಂದ ಆ ಜಿಲ್ಲಾಧಿಕಾರಿ ಟೂರ್ ಮಾಡುವುದು. ಬೊಂಬಾಯಿಯಲ್ಲಿ ಒಂದು ದೊಡ್ಡ ಹೋಟಿಲಿನಲ್ಲಿ ಇವರಿಗೆ ಸನ್ಮಾನ. ಉಡುಪಿ ಜಿಲ್ಲಾಧಿಕಾರಿಗೆ ಬೊಂಬಾಯಿಯಲ್ಲಿ ಸನ್ಮಾನ ಅವರಿಗೆ ಸಂಬಂಧಪಟ್ಟಂಥ ಎಲ್ಲರೂ ಅಲ್ಲಿ ಇದ್ದಾರೆ. ಅವರು, ಇವರಿಗೆ ಗಿಫ್ಟ್ ಕೊಡುತ್ತಿದ್ದಾರೆ.

ಅಧ್ಯಕ್ಷರು :— ನೀವು ಎಲ್ಲಾ ಹೇಳಿಬಿಟ್ಟರೆ, ಅವರು ಇಲ್ಲಿ ಇಲ್ಲ, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಏನು ಹೇಳುತ್ತೇನೆಂದರೆ, I know that official personally. ಇವೆಲ್ಲಾ ಮಾಡಿದ್ದಾರೋ, ಮಾಡಿಲ್ಲವೋ ನನಗೆ ಗೊತ್ತಿಲ್ಲ. He is not here to defend himself. ಬಾಂಬೆಗೆ ಹೋದರು ಎಂದು ಹೇಳುತ್ತೀರಿ. ಮೊಯ್ಲಿಯವರೇ ತಾವೇ ಹೇಳಿ. How can he defend himself

ಶ್ರೀ ಯು.ಆರ್. ಸಭಾಪತಿ :— ಅದು ಬೇಡ ಬಿಡಿ. ಆ ಫೋಟೋ ಇತ್ಯಾದಿಗಳ ಬಗ್ಗೆ ಅವರು ತನಿಖೆ ಮಾಡಲಿ. ಆದರೆ, ನನ್ನ ಪ್ರಶ್ನೆ ಇಷ್ಟೆ. ಈ ವಿಚಾರ ನಡೆದು ಸುಮಾರು ಒಂದೂವರೆ ತಿಂಗಳಾಗಿದೆ. ನಾನು ಇದರ ಬಗ್ಗೆ ಪ್ರೆಸ್ ರಿಲೀಸ್ ಕೊಟ್ಟಿದ್ದೇನೆ. 20 ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿರತಕ್ಕ ಮನೆಯ ಫೋಟೋ ಕೊಟ್ಟು, ಎಲ್ಲಾ ಪೇಪರಿನಲ್ಲಿ ಹಾಕಿಸಿದ್ದೇನೆ. ಅದನ್ನು ಮುಖ್ಯ ಕಾರ್ಯದರ್ಶಿಗಳಿಗೆ ಕೊಟ್ಟಿದ್ದೇನೆ. ಅದರ ಒಂದು ಕಾಪಿಯನ್ನು ಮಾನ್ಯ ಸಚಿವರಿಗೂ ಕಳುಹಿಸಿಕೊಟ್ಟಿದ್ದೇನೆ. ಕುಂದಾಯ ಕಾರ್ಯದರ್ಶಿಗಳಿಗೂ ಕಳುಹಿಸಿಕೊಟ್ಟಿದ್ದೇನೆ. ಮತ್ತು ಮುಖ್ಯಮಂತ್ರಿಗಳಿಗೂ ಕೊಟ್ಟಿದ್ದೇನೆ. ಇದರ ಬಗ್ಗೆ ಏನು ತನಿಖೆ ಮಾಡಿದ್ದಾರೆ? ಸರ್ಕಾರ ಪ್ರಕೃತಿ ವಿಕೋಪದ ಹಣವನ್ನು ಈ ರೀತಿ ದುರುಪಯೋಗ ಮಾಡಬಹುದೆ? ಈ ಸದನಕ್ಕೆ ಈ ರೀತಿಯ ಸುಳ್ಳು ಹೇಳಿಕೆಗಳನ್ನು ಮಂತ್ರಿಗಳ ಹತ್ತಿರ ಹೇಳಿಸಿದ್ದಾರಲ್ಲ, 351ರ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ಈ ರೀತಿ ಉತ್ತರ ಕೊಟ್ಟಿದ್ದಾರಲ್ಲಾ, ಇದಕ್ಕೆ ಸಚಿವರು ಏನು ಉತ್ತರ ಕೊಡುತ್ತಾರೆ ಎಂಬುದನ್ನು ದಯವಿಟ್ಟು ನಿಮ್ಮ ಮೂಲಕ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ :— ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಅಧಿಕಾರಿಗಳ ವಿಚಾರದಲ್ಲಿ ನಾನಂತೂ ಪ್ರಶ್ನೆ ಎತ್ತುವುದಿಲ್ಲ. ಆದರೆ, ಇವತ್ತು ಉಡುಪಿ ಜಿಲ್ಲೆಯಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ. ಅದನ್ನು ಸರ್ಕಾರದ ಗಮನಕ್ಕೆ ತರದೇ ಇದ್ದರೆ, ಇದೇ

ಮಾದರಿಯಾಗುತ್ತದೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಎಲ್ಲಾ ಅಧಿಕಾರಿಗಳಿಗೆ ಕೂಡ ಒಂದು ಮಾದರಿಯಾಗುತ್ತದೆ. ಏಕೆಂದರೆ ಏನು ಮಾಡಿದರೂ ನಡೆಯುತ್ತದೆ ಎಂದು. ಅದನ್ನು ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿದರು. 744 ಲಕ್ಷ 90 ಸಾವಿರ ರೂಪಾಯಿಗಳ ಪ್ರಸ್ತಾವನೆಯನ್ನು ಕಳುಹಿಸಿದರು. ಆದರೆ, ರಿಲೀಸ್- ಮಾಡಿದ್ದು 103.97 ಲಕ್ಷ ರೂಪಾಯಿಗಳು ಮಾತ್ರ ಒಂದು ಜಿಲ್ಲೆಗೆ ಹಣದ ಅವಶ್ಯಕತೆಯೇ ಇಲ್ಲವೆಂದು ಹೇಳಿಬಿಟ್ಟರೆ ಏನು ಹೇಳುವುದು ಯಾರು ತಮಗೆ ವರದಿ ಕೊಟ್ಟರು. ಜಿಲ್ಲಾಧಿಕಾರಿಗಳೇ ವರದಿ ಕೊಟ್ಟಿರಬೇಕು How can he mislead the Government? ಎರಡನೆಯದಾಗಿ ಈಗ ಪಿ.ಡಬ್ಲ್ಯೂ.ಡಿ. ಮೂರು ತಾಲ್ಲೂಕಿಗೆ ಸೇರುತ್ತದೆ. ನಮ್ಮ ಕಾರ್ಕಳ ತಾಲ್ಲೂಕು ಕೂಡ ಉಡುಪಿ ಜಿಲ್ಲೆಗೆ ಬರುತ್ತದೆ. ಅವರು ಏನು ಹೇಳುತ್ತಾರೆಂದರೆ, ಎರಡು ತಾಲ್ಲೂಕಿಗೆ ಪಿ.ಡಬ್ಲ್ಯೂ.ಡಿ. ಮೂಲಕ ಹಣ ಕೊಟ್ಟಿದ್ದೇವೆಂದು ಕಾರ್ಕಳದಲ್ಲಿ ಕೂಡ ನಾವು ಎಸ್ಟಿಮೇಟ್ ಕೊಟ್ಟಿದ್ದೇವೆ zero release-! ಪಿ.ಡಬ್ಲ್ಯೂ.ಡಿ ಮೂಲಕ ಹಣ ರಿಲೀಸೇ ಮಾಡಲಿಲ್ಲ. ಇದು ಏನರ್ಥ? ಪ್ರಸ್ತಾವನೆ ಇಲ್ಲದಿದ್ದರೆ ಸರಿ, ರಿಲೀಸ್ ಮಾಡಲಿಲ್ಲ. ಏಕೆಂದರೆ, ಒಂದು ಆತುರ, ಆ ಹಣವನ್ನೆಲ್ಲಾ ಉಳಿಸಿ, ಡಿ.ಸಿ. ಆಫೀಸಿಗೆ ಹಾಕಿಬಿಡೋಣ ಎಂದು. ಇದಕ್ಕೆ ಆಡಳಿತಾತ್ಮಕ ಅನುಮೋದನೆ ಇಲ್ಲ, ತಾಂತ್ರಿಕ ಅನುಮೋದನೆ ಇಲ್ಲ. ತಾವು ಅದನ್ನು ನೋಡಬೇಕು. conduct an immediate enquiry. ಏನು ಫರ್ನೀಚರ್ ಅಲ್ಲಿದೆ! ಈ ರೀತಿಯಲ್ಲಿ ಅಧಿಕಾರಿಗಳು ಐಶಾರಾಮ ಜೀವನ ಮಾಡುತ್ತಿದ್ದಾರೆ. ಅದು ಕೂಡ ಪ್ರಕೃತಿ ವಿಕೋಪಕ್ಕೆ ಕೊಟ್ಟ ಹಣ, ಅವರಿಗೆ ಶಾಪ ಬರುವುದಿಲ್ಲವೇ? Are they not afraid of God or of Curse? ಇವತ್ತು ಜನಗಳಿಗೆ ಅಲ್ಲಿ ತೀವ್ರವಾಗಿ ಹಣ ಖರ್ಚು ಮಾಡಬೇಕು. ಅಲ್ಲಿ ಸೀ ಇರೋಷನ್ ಆಗುತ್ತದೆ, ಎಂ.ಐ.ನಲ್ಲಿ ಹಣ ಖರ್ಚು ಮಾಡಬೇಕು. ಮಾರ್ಕ ಎಲ್ಲಾ ತಮಗೆ ಗೊತ್ತಿರಬೇಕು. ತಾವು ಪತ್ರಿಕೆಯಲ್ಲಿ ನೋಡಿರಬಹುದು. ಕೆನರಾ ಆಟೋಮೊಬೈಲ್ ಅಸೋಸಿಯೇಷನ್‌ನವರು ಹೇಳಿದ್ದಾರೆ, ನಾವು ಬಸ್ಸು ನಿಲ್ಲಿಸಿಬಿಡುತ್ತೇವೆಂದು ಪ್ರಕೃತಿ ವಿಕೋಪದಲ್ಲಿ ಅಷ್ಟು ಮಳೆ ಬರುತ್ತದೆ. ಈ ವರ್ಷ ಡಾಂಬರು ಹಾಕಿದರೆ, ಬರುವ ವರ್ಷ ಅದು ಹೊರಟುಹೋಗುತ್ತದೆ. ಇದು ಸಂಪೂರ್ಣವಾದಂಥ ದುರುಪಯೋಗ. ತಾವು ಸೋಮಶೇಖರ್‌ರವರೇ, ಇದನ್ನು ಬಾರಾ ಖೂನ್ ಮಾತು ಎಂದು ಹೇಳಿ, ಈ ತರಹ ಹೇಳಲಿಕ್ಕೇ ಬಾರದು. You are very sensitive person, I know you very well. Irrespective of the personalty, we will have to punish. I think he needs to be suspended immediately. ಏಕೆಂದರೆ, ಎಂ.ಪಿ. ಫಂಡ್‌ಗಳಲ್ಲಿ ವಾಚನಾಲಯಕ್ಕೆ ಕೊಟ್ಟಂಥ ಹಣದಲ್ಲಿ ಏರ್‌ಕಂಡೀಷನ್ ಹಾಕಿ, ನೀವು ಆಫೀಸ್ ಮಾಡುವುದಿದ್ದರೆ, ಷಟಲ್ ಕೋರ್ಟ್ ಮಾಡುವುದಿದ್ದರೆ, ಏನು ಅಧ್ಯಕ್ಷರೇ, ಷಟಲ್ ಕೋರ್ಟ್ ಮುಖ್ಯವೇ? ಅದೂ 50 ವರ್ಷದ ಸ್ವಾತಂತ್ರ್ಯ ಸಂಗ್ರಾಮದ ಸೆಲಬರೇಷನ್‌ಗೆ ಕೊಟ್ಟಂಥ ಹಣ ಮಾನ್ಯ ಭೈರೇಗೌಡರೇ...

ಶ್ರೀ ಸಿ. ಭೈರೇಗೌಡ :— ನನಗೂ ಕೂಡ ಇದು ಆಶ್ಚರ್ಯವಾಗುತ್ತಿದೆ. ಈ ರೀತಿ ಮಾಡುವುದಕ್ಕೆ ಹೇಗೆ ಸಾಧ್ಯ?

ಶ್ರೀ ಎಂ. ವೀರಪ್ಪ ಮೊಯ್ಲಿ:— ಮಾನ್ಯ ಸಭಾಪತಿಯವರು ಕಳೆದ ಎರಡು ತಿಂಗಳಿಂದ ಈ ವಿಷಯವನ್ನು ರೈಸ್ ಮಾಡುತ್ತಲೇ ಇದ್ದಾರೆ. ನಾನು ಒಂದೆರಡು ಸಾರಿ ಅವರಿಗೆ ಹೇಳಿದ್ದೆ ಈ ತರಹ ಏಕೆ ಓಪನ್ ಆಗಿ ಅಲಿಗೇಷನ್ ಮಾಡುತ್ತೀರಿ? ಚಾರ್ಜಸ್ ಮಾಡಬೇಡಿ. ಅದೂ ಕೂಡ ಜಿಲ್ಲಾಧಿಕಾರಿಗಳ ಮೇಲೆ ಆಪಾದನೆ ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡಬೇಕು ಎಂದು ನಾನು 2-3 ಸಾರಿ ಫೋನ್‌ನಲ್ಲಿ ಸಭಾಪತಿಯವರಿಗೆ ಜೋರು ಮಾಡಿದ್ದೆ. ಆಮೇಲೆ ನಾನೇ ಸ್ವತಃ ವೆರಿಫೈ ಮಾಡಿದೆ. ಸ್ವರ್ಣಜಯಂತಿಗೆ ಕೊಟ್ಟ ಹಣದಲ್ಲಿ ಷಟಲ್ ಕೋರ್ಟ್, ಮಾಚನಾಲಯಕ್ಕೆ ಕೊಟ್ಟ ಹಣದಲ್ಲಿ ಏರ್‌ಕಂಡೀಷನ್ ಆಫೀಸ್. ಅದಕ್ಕೆ ಮಾತ್ರ ಟೆಕ್ನಿಕಲ್ ಅಪ್ರೂವಲ್ ಬೇಡ. ಈ ತರಹ ಗವರ್ನಮೆಂಟ್ ಫಂಡ್‌ಗಳನ್ನು ಡೈವರ್ಟ್ ಮಾಡಿಕೊಂಡು, ಅಡಳಿತಾತ್ಮಕ ಅನುಮೋದನೆ ಅಥವಾ ಟೆಕ್ನಿಕಲ್ ಅಪ್ರೂವಲ್ ಯಾವುದೂ ಇಲ್ಲದೆ ನೀವು ಒಂದು ಆಫೀಸ್ ಕಟ್ಟುವುದಿದ್ದರೆ ಏನರ್ಥ? ಡಿ.ಸಿ. ಆಫೀಸ್ ಕಟ್ಟುವುದು ಎಂದರೆ ಏನರ್ಥ? ಇದು ತೀರಾ ಎಲ್ಲಾ ರೀತಿಯಲ್ಲಿ ಆಯ್ಕಾಯಿ. We do not want to make personal allegations. What is happening is misuse of Government funds, misappropriation of funds. ಸರ್ಕಾರದ ಫಂಡನ್ನು ಯಾವ ರೀತಿಯಲ್ಲಿ ಮಿಸ್‌ಯೂಸ್ ಮಾಡಿದ್ದೀರೆ, ಮಿಸ್ ಅಪ್ರೋಪ್ರಿಯೇಟ್ ಮಾಡಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಧ್ಯಕ್ಷರೆ, ಇದು ನೇರವಾದಂಥ ಮಿಸ್‌ಅಪ್ರೋಪ್ರಿಯೇಷನ್. ಏಕೆಂದರೆ, ಸ್ವರ್ಣ ಜಯಂತಿಗೆ ಕೊಟ್ಟ ಹಣದಲ್ಲಿ ನೀವು ಷಟಲ್ ಕೋರ್ಟ್ ಮಾಡಿದರೆ, it is misappropriation, it is not diversion or misapplication. It amounts to misfeasance. This gross irregularity is a thing which cannot be pardoned at all in any administration. ಅದೇ ತರಹ ಬಾಕಿ ಡಿ.ಸಿ.ಯವರೂ ಮಾಡುತ್ತಾರೆ. ಅವರೂ ಏರ್‌ಕಂಡೀಷನ್ ಮಾಡುತ್ತಾರೆ. ಈ ರೀತಿ ಪ್ರಕೃತಿ ವಿಕೋಪಕ್ಕೆ ಕೊಟ್ಟಂಥ ಹಣವನ್ನೂ ಕೂಡ ಬೇರೆ ರೀತಿಯಲ್ಲಿ ಉಪಯೋಗ ಮಾಡಿದರೆ ತಾವು ಸಹಿಸುತ್ತೀರಾ? Can you tolerate this kind of administration? ಆದ್ದರಿಂದ, ಇದು ಬಹಳ ತೀವ್ರವಾಗಿ, ಗಂಭೀರವಾಗಿ ತೆಗೆದುಕೊಳ್ಳಬೇಕಾಂಥ ವಿಚಾರ. ಇದು ಏಕೆ ಸಾರಾಸಗಟಾಗಿ ಈ ತರಹ ಆಗುತ್ತಿದೆ? ಅಧಿಕಾರಿಗಳ ಮೇಲೆ ನನ್ನ ಸಾರ್ವಜನಿಕ ಜೀವನದಲ್ಲಿಯೇ ಈ ರೀತಿ ಚಾರ್ಜಸ್ ಮಾಡಲಿಲ್ಲ. To be frank with you, after due verification I am making this ನಾನು ಎರಡು ಸಾರಿ ಹೇಳಿದೆ. ಮಾನ್ಯ ಮಂತ ಸಾಲಿಯಾನ ಅವರಿಗೂ ಹೇಳಿದೆ. ನೀವು ಸುಮ್ಮನೆ ಪ್ರೆಸ್ ಕಾನ್‌ಫರೆನ್ಸ್ ಮಾಡಿ, ಸತ್ಯಾಗ್ರಹ ಮಾಡುವುದು ಬೇಡ ಎಂದು ಅವರಿಗೆ ಹೇಳಿದೆ. But then after verifying only I am making this. ಇದು ಸದನಕ್ಕೆ ಬರಬೇಕಾದರೆ, they have exhausted all channels...

Mr. Speaker :— All Possible avenues...

ಶ್ರೀ ಎಂ. ವೀರಪ್ಪ ಮೊಯ್ಲಿ:— ಮುಖ್ಯಮಂತ್ರಿಗಳ ಹತ್ತಿರ ಹೋಗಿ ರೆಪ್ರಸೆಂಟ್ ಮಾಡಿದ್ದಾರೆ ಮುಖ್ಯಕಾರ್ಯದರ್ಶಿಯವರ ಹತ್ತಿರ ಡಾಕ್ಯುಮೆಂಟ್ಸ್ ಕೊಟ್ಟು, ಹೇಳಿದ್ದಾರೆ. He enjoys all immunities. This is what has happened. They have exhausted all courses open to them. ಈಗ ಏನು ಹೇಳುತ್ತಾರೆ, ಎಲ್ಲಾ ರೆಪ್ರಸೆಂಟಿಟೀವ್ಸ್ ಶಾಮೀಲಾಗಿರಬಹುದು ಎಂದು ಹೇಳುತ್ತಾರೆ. ಅವರಿಗೆ ಡಿ.ಸಿ.ಯವರ ಹತ್ತಿರ ಏನೋ ಆಗಬೇಕು, ಆ ಫಲಾಪೇಕ್ಷೆಯಿಂದ ಈ ರೀತಿಯಲ್ಲಿ ಶಾಮೀಲಾಗಿ ಇವತ್ತು ಎಲ್ಲಾ ಸುಮ್ಮನಿದ್ದಾರೆಂದು ಸಾರ್ವಜನಿಕರು ತಿಳಿದುಕೊಳ್ಳುತ್ತಾರೆ. It is only a tip of the ice berg. ಇನ್ನೂ ಬೇರೆ ಬೇರೆ ವಿಚಾರಗಳು ಇವೆ. Unless it is verified, we won't raise it. This is an issue which is very gross and unpardonable.

ಶ್ರೀ ವಸಂತ. ವಿ. ಸಾಲಿಯಾನ (ಕಾಪು) :— ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಗೆ ಪ್ರಕೃತಿ ವಿಕೋಪದ ಬಾಬಿಗೆ 163 ಲಕ್ಷ 95 ಸಾವಿರ ರೂಪಾಯಿ ಹಣ ಬಂದಿದೆ. ಅದರಲ್ಲಿ ಈಗ ಏನಾಗಿದೆ ಅಂದರೆ ಜಿಲ್ಲಾ ಪಂಚಾಯತಿ ಕೆಲಸ ಇದೆ, ಲೋಕೋಪಯೋಗಿ ಇಲಾಖೆಯ ಕೆಲಸ ಇದೆ. ಎಂ.ಐ. ಕೆಲಸ ಇದೆ. ಬೇರೆ ಬೇರೆ ರೀತಿಯ ಕೆಲಸ ನಡೆಯುತ್ತಿದೆ. ಆದರೆ ಇಲ್ಲಿ ಏನೊಂದು ವರದಿಯನ್ನು ಜಿಲ್ಲಾಧಿಕಾರಿಗಳು ಮಾನ್ಯ ಕಂದಾಯ ಸಚಿವರಿಗೆ ಕೊಟ್ಟಿದ್ದಾರೆಂದರೆ 28 ಲಕ್ಷ 58 ಸಾವಿರ ರೂಪಾಯಿ ಉಳಿತಾಯವಾಗಿದೆ ಎಂದು ಹೇಳಿದ್ದಾರೆ. ನಾನು ತಮಗೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಬಿರುಗಾಳಿಯಲ್ಲಿ ಮಳೆಯಿಂದ ಸತ್ತ ಒಂದು ಹುಡಿಗಿ ಮತ್ತೊಬ್ಬ ಜನ. ಅವರ ಹೆಸರು ಸೀನಾಪೂಜಾರಿ ಮತ್ತು ಪಾಟಕರ್. ಇವರಿಗೆ ಪ್ರಕೃತಿ ವಿಕೋಪದಲ್ಲಿರುವ ಹಣದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ಆಗದೇ ಇರುವಂತಹ ಜಿಲ್ಲಾಧಿಕಾರಿಗಳು, ಸುಮಾರು 20 ಲಕ್ಷ ರೂಪಾಯಿಗಳಲ್ಲಿ ಜಿಲ್ಲಾಧಿಕಾರಿಗಳ ವಾಸಕ್ಕೆ ಮನೆ ಕಟ್ಟುವುದಕ್ಕೆ ಹಣ ಇದೆ. ಉಡುಪಿ ಜಿಲ್ಲೆಯ 3 ವಿಧಾನಸಭಾ ಕ್ಷೇತ್ರಕ್ಕೆ ಪ್ರಕೃತಿ ವಿಕೋಪದಲ್ಲಿ ಸುಮಾರು 7 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇವತ್ತು ಪ್ರಕೃತಿ ವಿಕೋಪದಲ್ಲಿರುವ

(ಶ್ರೀ ಬಿ.ಬಿ. ಶಿವಪ್ಪನವರು ಅಧ್ಯಕ್ಷಪೀಠವನ್ನಲಂಕರಿಸಿದರು)

ಹಣವನ್ನು ನೇರವಾಗಿ ಜಿಲ್ಲಾ ಪಂಚಾಯಿತಿ ಕಾಮಗಾರಿಗಳಿಗೆ ಖರ್ಚು ಮಾಡುವುದಕ್ಕೆ ಹಣ ಇಲ್ಲ. ಲೋಕೋಪಯೋಗಿ ರಸ್ತೆಗಳ ರಿಪೇರಿ ಮಾಡುವುದಕ್ಕೆ ಹಣ ಇಲ್ಲ. ಅಣೆಕಟ್ಟುಗಳ ಹಲಗೆ ಜಖ್ಮಿ ಹೋಗಿದೆ. ಮೈನರ್ ಇರಿಗೇಷನ್‌ನಲ್ಲಿ ಅನೇಕ ಅಣೆಕಟ್ಟುಗಳಿಗೆ ಅಂದಾಜು ಪಟ್ಟಿ ತಯಾರು ಮಾಡಿ ಕಳುಹಿಸಿದ್ದೇವೆ. ಆ ಅಣೆಕಟ್ಟುಗಳಿಗೆ ಹಲಗೆಗಳನ್ನು ಒದಗಿಸಿಕೊಡುವುದಕ್ಕೆ ಜಿಲ್ಲಾಧಿಕಾರಿಗಳ ಬಳಿ ಹಣ ಇಲ್ಲ ಎಂದು ಹೇಳಿದರು. ನನ್ನ ಸ್ವಂತ ಊರಿನ ಒಂದು ರಸ್ತೆ ಬಹಳ ನಾದುರಸ್ತಿಯಲ್ಲಿದೆ. ಅದು ಜಿಲ್ಲಾ ಪಂಚಾಯಿತಿ ರಸ್ತೆ. ಆ ರಸ್ತೆ ದುರಸ್ತಿಗೆ ಒಂದು ಲಕ್ಷ ರೂಪಾಯಿ ಕೊಡಿ ಎಂದು ನಾನು ಒಂದು ಹತ್ತು ಸಲ ಹೋದೆ. ಪ್ರಕೃತಿ ವಿಕೋಪದಲ್ಲಿ ಬಂದಿದ್ದಂತಹ ಎಲ್ಲಾ ಹಣವನ್ನು ಖರ್ಚು ಮಾಡಲಾಗಿದೆ, ನನ್ನ ಹತ್ತಿರ

ಒಂದು ಪೈಸೆ ಹಣ ಸಹ ಇಲ್ಲ. ನೀವು ಸರ್ಕಾರದ ಜೊತೆ ಚರ್ಚೆ ಮಾಡಿ, ನೀವು ನಮಗೆ ಹಣ ಒದಗಿಸಿಕೊಡಿ ಆಗ ನಾವು ಹಣ ಖರ್ಚು ಮಾಡುವುದಕ್ಕೆ ಆಗುತ್ತದೆಂದು ಹೇಳಿದರು. ಒಬ್ಬ ಜಿಲ್ಲಾಧಿಕಾರಿಗಳಿಗೆ ಸರ್ಕಾರದವರು ಹಣವನ್ನು ಒದಗಿಸಿಕೊಡುತ್ತಾರೆ. ಆ ಹಣವನ್ನು ನೇರವಾಗಿ ಬೇರೆ ಬೇರೆ ಯೋಜನೆಗಳಿಗೆ ಖರ್ಚು ಮಾಡುವ ಬದಲಿಗೆ, ಅವರ ಷೋಕಿಗೆ, ಟಿನ್ನಿಸ್ ಕೋರ್ಟ್‌ಗೆ ಹಣ ಖರ್ಚು ಮಾಡುವುದು. ಅವರ ವಾಸದ ಮನೆ ಕಟ್ಟಲಿಕ್ಕೆ ಸರ್ಕಾರದ ಒಪ್ಪಿಗೆ ಪಡೆಯಲಿಲ್ಲ. ಅದಕ್ಕೆ ಅಂದಾಜು ಸಹ ಮಾಡಲಿಲ್ಲ. ಏನೂ ಆಗಿಲ್ಲ, ಅವರಿಗೆ ಹಣ ಎಲ್ಲಿಂದ ಬಂತು? ಆದ್ದರಿಂದ ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಯಪೂರ್ವಕವಾಗಿ ಬೇಡಿಕೊಳ್ಳುವುದು ಇಷ್ಟೇ. ಇಂತಹ ಘಟನೆ ಇವತ್ತಿನವರೆಗೂ ಯಾವ ಜಿಲ್ಲೆಯಲ್ಲಿಯೂ ಆಗಲಿಲ್ಲ. ಆ ಜಿಲ್ಲಾಧಿಕಾರಿಗಳ ದುರಂಹಕಾರ ಏನು ಇದೆ ಅದನ್ನು ನಿಲ್ಲಿಸಬೇಕಾದರೆ ಅವರನ್ನು ನೀವು ಇವತ್ತೇ ಸಸ್ಪೆಂಡ್ ಮಾಡಬೇಕು. ನಾವು ಎಲ್ಲಾ ವಿಚಾರಣೆಯನ್ನು ಮಾಡಿದ್ದೇವೆ. ಆ ಬಗ್ಗೆ ಎಲ್ಲಾ ದಾಖಲೆಗಳು ನಮ್ಮ ಹತ್ತಿರ ಇದೆ. ಜಿಲ್ಲಾ ಪಂಚಾಯಿತಿಯಿಂದ ಎಲ್ಲಾ ದಾಖಲೆಗಳನ್ನು ಕಾಮಗಾರಿಗಳ ಬಗ್ಗೆ ನಾವು ಫ್ಯಾಕ್ಸ್ ಮೂಲಕ ತರಿಸಿದ್ದೇವೆ. ಲೋಕೋಪಯೋಗಿ ಇಲಾಖೆಯಿಂದ, ಎಂ.ಐ. ಇಲಾಖೆಯಿಂದ ಫ್ಯಾಕ್ಸ್ ಮೂಲಕ ದಾಖಲೆಗಳನ್ನು ತರಿಸಿ ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ನಾನು ಜಿಲ್ಲಾಧಿಕಾರಿಗಳ ಮೇಲೆ ನೇರವಾಗಿ ಆಪಾದನೆ ಮಾಡುವುದು ಇಷ್ಟೆ, ಪ್ರಕೃತಿ ವಿಕೋಪದ ಹಣವನ್ನು ನೇರವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ತಾವು ಅವರಿಗೆ ಈ ಹಣವನ್ನು ಖರ್ಚು ಮಾಡಲು ಅಧಿಕಾರ ಕೊಟ್ಟಿದ್ದರೆ ಪರವಾಗಿಲ್ಲ. ನೀವು ಹೇಳಿ, ನಾನು ಅವರಿಗೆ ಅಧಿಕಾರ ಕೊಟ್ಟಿದ್ದೇವೆಂದು. ಆಗ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ಇದರ ಬಗ್ಗೆ ತಾವು ನೇರವಾಗಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇನ್ನೂಳಿದ 27 ಜಿಲ್ಲೆಗಳಿಗೂ ಇದು ಹರಡುತ್ತದೆ. ಎಲ್ಲಾ ಜಿಲ್ಲಾಧಿಕಾರಿಗಳು ಇದೇ ರೀತಿಯಲ್ಲಿ ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಸೂಕ್ತವಾದ ತನಿಖೆ ನಡೆಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) :— ಮಾನ್ಯ ಅಧ್ಯಕ್ಷರೆ, ನನ್ನ ಕೆಲವು ವಿಚಾರಗಳನ್ನು ಅವರು ಹೇಳಿದರು. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಎತ್ತಿದಂತಹ ವಿಚಾರದ ಬಗ್ಗೆ ಹೇಳುತ್ತೇನೆ. ಜನಪ್ರತಿನಿಧಿಗಳ ಜವಾಬ್ದಾರಿ ಇದೆ. ಲೋಕಸಭಾ ಸದಸ್ಯರ ಅನುದಾನದಲ್ಲಿ 4 ಲಕ್ಷ ರೂಪಾಯಿಗಳನ್ನು ವಾಚಾನಾಲಯಕೋಸ್ಕರ ಅದೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಖರ್ಚು ಮಾಡಿದ್ದಾರೆ. ಲೋಕಸಭಾ ಸದಸ್ಯರ ಕಛೇರಿ ಅದೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿದೆ. ಹಾಗಾದರೆ 4 ಲಕ್ಷ ರೂಪಾಯಿಗಳ ಅವ್ಯವಹಾರವಾಗಿರುವುದು ಅಥವಾ ಅದು ದುರ್ಬಳಕೆಯಾಗಿರತಕ್ಕಂಥ ವಿಚಾರ ಲೋಕಸಭಾ ಸದಸ್ಯರ ಅರಿವಿಗೆ ಬಾರದೇ ಇರತಕ್ಕಂಥಾದ್ದು ಸರಿಯೇ? ನೀವು ಆ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ನಾನು ಹೇಳತಕ್ಕಂಥಾದ್ದು..

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಲೋಕಸಭಾ ಸದಸ್ಯರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಅವರ ಬಗ್ಗೆ ಮಾತನಾಡಲು ಇವರು ನೋಟಿಸ್ ಕೊಟ್ಟಿದ್ದಾರಾ? ಲೋಕಸಭಾ ಸದಸ್ಯರ ಬಗ್ಗೆ ಇವರು ಮಾತನಾಡುವುದು ಸರಿಯೇ? ಅವರು ಜಿಲ್ಲಾಧಿಕಾರಿಗಳ ಬಗ್ಗೆ ಮಾತನಾಡುತ್ತಾರೋ ಅಥವಾ ಲೋಕಸಭಾ ಸದಸ್ಯರ ಬಗ್ಗೆ ಮಾತನಾಡುತ್ತಾರೋ, ಹೇಳಲಿ.

(ಗೊಂದಲ)

ಛೇರ್ಮನ್ :— ತಾವು ಕುಳಿತುಕೊಳ್ಳಿ.

(ಗೊಂದಲ)

ಛೇರ್ಮನ್ :— ಈಗ ಸಭಾಪತಿಯವರು ಏನು ವಿಷಯವನ್ನು ಎತ್ತಿದ್ದಾರೆ, ಅದಕ್ಕೆ ಸೀಮಿತವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :— ನಾನು ಹೇಳುವಂತಾದ್ದು ಇಷ್ಟೆ...

ಛೇರ್ಮನ್ :— ತಾವು ಮಾತನಾಡುವಂಥಾದ್ದು ರೇಕಾರ್ಡ್‌ಗೆ ಹೋಗಬಾರದು ಎಂದು ಹೇಳುತ್ತೇನೆ. ಅವರು ಎತ್ತಿರುವ ವಿಚಾರ ಬೇರೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ತಾವು ಈಗ ಯಾವುದೋ ಬೇರೆ ವಿಷಯ ತೆಗೆದುಕೊಂಡಿರಿ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಇಲ್ಲಿ ರೆಕಾರ್ಡ್‌ಗೆ ಹೋಗುವುದು ಬಿಡುವುದು ಪ್ರಶ್ನೆ ಅಲ್ಲ. ರೇಕಾರ್ಡ್‌ಗೆ ಯಾವುದೇ ಮಾತು ಹೋಗದಿದ್ದರೂ ಸಹ ಅಲ್ಲಿ ಏನಾಗಿದೆ, ಅದನ್ನು ತಿಳಿದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯಲ್ಲಿ ಹಣವನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದೆ ಆ ಉದ್ದೇಶಕ್ಕಾಗಿ ಖರ್ಚು ಮಾಡದೇ ಬೇರೆ ಉದ್ದೇಶಕ್ಕಾಗಿ ಖರ್ಚು ಮಾಡಿದ್ದಾರೆ ಎನ್ನುತ್ತಲೂ ಒಂದು ಆಪಾದನೆಯನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರಾದ ಸಭಾಪತಿಯವರು ಎತ್ತಿದ್ದಾರೆ. ಹಿರಿಯ ಸದಸ್ಯರಾದ ಮಾನ್ಯ ವೀರಪ್ಪಮೊಯ್ಲಿಯವರು ಸಾಮಾನ್ಯವಾಗಿ ಇಂತಹ ವಿಚಾರಗಳಲ್ಲಿ ಅವರೇ ಹೇಳಿದ ಹಾಗೆ ಪದೇ ಪದೇ ಬಾಯಿ ಹಾಕುವುದಿಲ್ಲ. ಅವರು ಹೇಳಿದ್ದನ್ನು ನಾನು

ಅಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಅವರಿಗೆ ಆಶ್ವಾಸನೆ ಕೊಡುತ್ತೇನೆ, ವಿಭಾಗಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿಸಿ ಒಂದು ವರದಿಯನ್ನು ತರಿಸುತ್ತೇನೆ. ಅದನ್ನು ನೋಡಿ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಅದನ್ನು ನಾನು ತೆಗೆದುಕೊಳ್ಳುತ್ತೇನೆ.

ಛೇರ್ಮನ್ :— ಈಗ ಶೂನ್ಯ ವೇಳೆಯಲ್ಲಿ ಬರುವ ವಿಷಯಗಳನ್ನು ತೆಗೆದುಕೊಳ್ಳೋಣ

ಅ) ಪಿ.ಯು.ಸಿ.ಯಲ್ಲಿ ಅನುತ್ತೀರ್ಣರಾಗಿರುವಂತಹ ವಿದ್ಯಾರ್ಥಿಗಳು ಮತ್ತೆ ವಿದ್ಯಾಭ್ಯಾಸ ಮುಂದುವರಿಸುವುದರ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಪ್ರಥಮ ಪಿ.ಯು.ಸಿ. ಯಲ್ಲಿ ಅನುತ್ತೀರ್ಣವಾಗಿರುವಂತಹ ವಿದ್ಯಾರ್ಥಿಗಳು ಮತ್ತೆ ವಿದ್ಯಾಭ್ಯಾಸ ಮುಂದುವರಿಸಬೇಕೆಂದು ಹೇಳಿದರೆ ಅಥವಾ ಅವರು ಕಾಲೇಜು ಬದಲಾಯಿಸಬೇಕಾದರೆ ಅಥವಾ ಸೆಕ್ಷನ್ ಬದಲಾಯಿಸಬೇಕಾದರೆ, ಅಥವಾ ಅವರು ಮತ್ತೆ ಅಡ್ಮಿಷನ್ ಪಡೆದುಕೊಳ್ಳಬೇಕಾದರೆ ಅವರು ಪಿ.ಯು.ಸಿ. ಬೋರ್ಡ್‌ನಿಂದ ಅನುಮತಿ ಪಡೆದುಕೊಳ್ಳಬೇಕು. ಈ ಅನುಮತಿಯನ್ನು ಪಡೆದುಕೊಳ್ಳುವಂತಹ ಸಂದರ್ಭ ಏನಾಗಿದೆ ಅಂದರೆ ಬೆಂಗಳೂರಿಗೆ ಬರಬೇಕು, ಇಲ್ಲಿ ಅರ್ಜಿಯನ್ನು ಸಲ್ಲಿಸಬೇಕು, ನಂತರ ಅವರು ಇಲ್ಲಿ ಕಾಯಬೇಕು, ನಂತರ ಪರ್ಮಿಷನ್ ಲೆಟರ್ ತೆಗೆದುಕೊಂಡು ಹೋಗಬೇಕು. ಗ್ರಾಮಾಂತರ ಪ್ರದೇಶದಲ್ಲಿ ಪಿ.ಯು.ಸಿ.ಯಲ್ಲಿ ಫೇಲಾದ ವಿದ್ಯಾರ್ಥಿಗಳು ಯಾರಿದ್ದಾರೆ, ಅವರಿಗೆ ಈ ಪರ್ಮಿಷನ್ ಲೆಟರ್ ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಕಳೆದ 10 ದಿವಸಗಳಿಂದ ನಾನು ಇಲ್ಲಿ ಇದ್ದಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಸುಮಾರು 50-60 ಜನ ಇಲ್ಲಿಗೆ ಬಂದಿದ್ದಾರೆ. ಬಂದವರು ಸುಮಾರು 3-4 ದಿವಸ ಕಾದು ಈ ಪರ್ಮಿಷನ್ ಲೆಟರ್ ಪಡೆದುಕೊಂಡು ಹೋಗುವಂತಹ ವ್ಯವಸ್ಥೆಯಾಗಿದೆ. ಮಾನ್ಯ ವಿದ್ಯಾಮಂತ್ರಿಗಳು ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿಗೆ ಬಂದು, ಪಿ.ಯು.ಸಿ. ಮಂಡಲಿಯಿಂದ ಈ ರೀತಿ ಪರ್ಮಿಷನ್ ಲೆಟರ್ ಪಡೆದುಕೊಂಡು ಹೋಗುವುದನ್ನು ನಿಲ್ಲಿಸಬೇಕು. ಅವರು ತಕ್ಷಣ ಯಾವ ಕಾಲೇಜಿನಲ್ಲಿ ಅಡ್ಮಿಷನ್ ಆಗುತ್ತಾರೋ ಆ ಕಾಲೇಜು ಮುಖಾಂತರವೇ ಅವರಿಗೆ ಬೇಕಾದ ಅನುಮತಿಯನ್ನು ಪಡೆದುಕೊಳ್ಳುವಂತೆ ಮಾಡಿ, ಅದಕ್ಕೆ ಬೇಕಾದ ಶುಲ್ಕವನ್ನು ಸಹ ಆ ಕಾಲೇಜು ಮುಖಾಂತರವೇ ಸ್ವೀಕಾರ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಇರುವ ವಿದ್ಯಾರ್ಥಿಗಳಿಗೆ ಆಗುವ ತೊಂದರೆಯನ್ನು ಮಾನ್ಯ ವಿದ್ಯಾ ಮಂತ್ರಿಗಳು ನಿವಾರಣೆ ಮಾಡಬೇಕೆಂದು ನಾನು ಸದನದ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—